ದೇವರ ದಾಸಿಮಯ್ಯ ಎಂಬ ಶರಣರು ಹೀಗೆ ಹೇಳುತ್ತಾರೆ:

**ಕರಿಯನಿತ್ತಡೆ ಒಲ್ಲೆ,**
**ಸಿರಿಯನಿತ್ತಡೆ ಒಲ್ಲೆ,**
**ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ,**
**ನಿಮ್ಮ ಶರಣರ ಸೂಳ್ನುಡಿಯ**
**ನೊಂದರಗಳಿಗೆ ಇತ್ತಡೆ,**
**ನಿಮ್ಮನಿತ್ತೆ ಕಾಣಾ ರಾಮಾನಾಥಾ.**

ದೇವರು ಗುಡಿಯಲ್ಲಿ, ಮೂರ್ತಿಯಲ್ಲಿ, ಮರದಲ್ಲಿ ಇಲ್ಲ, ಶರಣರು ಆಡುವ ಪವಿತ್ರವಾದ ನಿರ್ಮಲ ಮತ್ತು ಪಾರದರ್ಶಕ ಮಾತುಗಳಲ್ಲಿ ದೇವರು ತುಂಬಿಕೊಂಡಿರುತ್ತಾನೆ. ಶರಣರು ಆಡುವ ಮಾತುಗಳಲ್ಲಿ ದೇವನ ಹೊಳಹು ಸಮೃದ್ಧವಾಗಿರುತ್ತದೆ. ಅದಕ್ಕೇ ಪ್ರಭುದೇವರು, "ಮಾತೆಂಬುದು ಜ್ಯೋತಿರ್ಲಿಂಗ, ಸ್ವರವೆಂಬುದು ಪರತತ್ತ್ವ" ಎಂದು ಹೇಳುವುದು. ಶುದ್ಧಾಂತರಂಗದ ಸದ್ಭಕ್ತ ಆಡುವ ಮಾತು ಬೇರೆ ಅಲ್ಲ, ಜ್ಯೋತಿರ್ಲಿಂಗ ಬೇರೆ ಅಲ್ಲ. ಮಾತನಾಡುವಾಗ ಹೊರಡುವ ಸ್ವರವೇ, ಶಬ್ದವೇ ಪರತತ್ತ್ವದ ಬೋಧನೆ ನೀಡುತ್ತದೆ. ಅದೇ ಶಬ್ದಬ್ರಹ್ಮ.

ಮುಕ್ತಾಯಕ್ಕ ತನ್ನ ಅಣ್ಣ ಅಜಗಣ್ಣನಿಗಾಗಿ ದುಃಖಿಸಿ ಶೋಕಿಸುತ್ತಿರುವಾಗ ಪ್ರಭುದೇವರು ಆಕೆಯನ್ನು ಹೀಗೆ ಸಂತೈಸುತ್ತಾರೆ: "ನಿನ್ನ ಗುರುವಾದ ಅಜಗಣ್ಣ ನಿನ್ನನ್ನು ಅಗಲಿ ಹೋಗಿಯೇ ಇಲ್ಲ. ಅರಿವಿನ ರೂಪದಲ್ಲಿ ನಿನ್ನಂತರಂಗದಲ್ಲಿಯೇ ಇದ್ದಾನೆ. ಅಂತರಂಗದ ಅರಿವೇ ಸಾಧನೆಯ ಮಾರ್ಗದಲ್ಲಿ ಕೈಹಿಡಿದು ನಡೆಸುವ ಗುರು. ನಿನ್ನೊಳಗಿನ ಅರಿವೇ ನಿನ್ನ ಅಜಗಣ್ಣ ಗುರು" ಎಂದು ಸಮಾಧಾನ ಮಾಡುತ್ತಾರೆ. ಪ್ರಭುದೇವರ ಹಿರಿಮೆಗೆ ತಲೆ ಬಾಗಿದ ಮುಕ್ತಾಯಕ್ಕ, ಅವರನ್ನು ಒಂದು ಒಳ್ಳೆಯ ಪ್ರಶ್ನೆ ಕೇಳುತ್ತಾಳೆ: "ನೀವು ಭಗವಂತನ ಅಸ್ತಿತ್ವವನ್ನು ಅನುಭವಿಸಿದವರಾಗಿದ್ದರೆ ನನ್ನಣ್ಣನಂತೆ ಶಬ್ದಮುಗ್ಧರಾಗಿರಬೇಕು. ಎಷ್ಟೊಂದು ಮಾತುಗಳನ್ನು ಆಡುತ್ತಿರುವಿರಲ್ಲ? ಅದರಿಂದ ನೀವು ಲಿಂಗಾನುಭವಿಯಲ್ಲ. ಸಮರಸಾನುಭವ ಪಡೆದವನಿಗೆ ಮಾತಿನ ಆವಶ್ಯಕತೆಯೇ ಇಲ್ಲ. 'ಬ್ರಹ್ಮವನ್ನು ಅರಿತವರು ಸುಮ್ಮನಿರಬೇಕು. ಸತ್ಯವನ್ನು ಕಂಡವರು ಸತ್ತಂತಿರಬೇಕು.' ನಾವು ಕಂಡಿದ್ದೇವೆ ಎಂದು ಕಂಡವರಾರೂ ಹೇಳಿಕೊಳ್ಳುವುದಿಲ್ಲ. ಸುಮ್ಮನೆ ಅನುಭವಿಸುವವರಿಗೆ ಮಾತಿನ ಆವಶ್ಯಕತೆ ಇಲ್ಲ" – ಹೀಗೆ ಮುಕ್ತಾಯಕ್ಕನೆಂದಾಗ ಪ್ರಭುದೇವರು ಹೇಳುತ್ತಾರೆ, "ಭಕ್ತ ಭಕ್ತರ ನಡುವಿನ ಮಾತು, ಶರಣ ಶರಣರ ನಡುವಿನ ಸಂವಾದ ಪ್ರಾಪಂಚಿಕ ಬೊಬ್ಬೆಯಾಗುವುದಿಲ್ಲ, ಸಾಕ್ಷಾತ್ ಜ್ಯೋತಿರ್ಲಿಂಗವಾಗುತ್ತದೆ. ಆ ಸ್ವರದ ತುಂಬ, ಎಂದರೆ ಅಲ್ಲಿ ಹರಿಯುವ ಶಬ್ದದ ಅಲೆಗಳ ತುಂಬ ಪರತತ್ತ್ವವೇ ಹರಡಿಕೊಂಡಿದೆ. ಆ ನುಡಿಗಳ ನಡುವೆ ಭಗವಂತ ರಾಶಿರಾಶಿಯಾಗಿ, ಸಮೃದ್ಧವಾಗಿ ತುಂಬಿಕೊಂಡಿದ್ದಾನೆ. ಆ ಮಾತುಗಳಿಗೆ ಪ್ರಾಪಂಚಿಕ ಸೂತಕ ಅಂಟಿಲ್ಲ. ಮನಸ್ಸನ್ನು ಮೈಲಿಗೆ ಮಾಡುವಂತಹ ಸಂಸಾರದ ಕೆಸರು ಅಲ್ಲಿ ಮೆತ್ತಿಲ್ಲ. ಮನ ಬೆಳಗುವ ಜ್ಯೋತಿಸ್ವರೂಪದ ನುಡಿಗಳವು."



ಬಸವಣ್ಣನವರು, "ಶಿವಾನುಭವದ ಸುಖ ತಂದೊದಗಿದ ಭಕ್ತರ ನುಡಿಗಳು ಮೆಲ್ಲಗೆ ಮಳೆಗರೆದಂತೆ, ತಣ್ಣಗೆ ಗಾಳಿ ಬೀಸಿದಂತೆ ಇರುವುದರಿಂದಲೇ ಭಕ್ತರ ನುಡಿಯ ನಡುವೆ ಕೂಡಲಸಂಗಮದೇವ ರಾಶಿಯಾಗಿರ್ಪನು" ಎಂದಿದ್ದಾರೆ. ಸದ್ಭಕ್ತನಾಗುವವನ ಲಕ್ಷಣವನ್ನು ಶರಣರು ಇನ್ನೂ ಅನೇಕ ವಿಧದ ಮಾತುಗಳಲ್ಲಿ ಹೇಳಿದ್ದಾರೆ, "ಭಕ್ತನಾಗಬೇಕು ಭವವ ಹರಿದು; ಭಕ್ತನಾಗಬೇಕು ಸಕಲ ಪ್ರಪಂಚವ ಮರೆದು; ಭಕ್ತನಾಗಬೇಕು ಆಶಾಪಾಶವನೆಲ್ಲ ಹರಿದು; ಭಕ್ತನಾಗಬೇಕು ನಮ್ಮ ಅಖಂಡೇಶ್ವರನ ದಿವ್ಯಪಾದವ ನಂಬಿ."

ಇವೆಲ್ಲವೂ 'ಕೂಡಲಸಂಗಮದೇವ ಭಕ್ತರ ನುಡಿಯ ನಡುವೆ ರಾಶಿಯಾಗಿಪ್ಪನು' ಎಂಬ ಬಸವಣ್ಣನವರ ನುಡಿಗೆ ಸಾಕ್ಷಿಗಳಾಗಿವೆ.

●

# ನೆನಪಿನಂಗಳದಿಂದ.....

ಪ್ರವ್ರಾಜಿಕಾ ಭಾರತೀಪ್ರಾಣಾ

"ತ್ಯಾಗಜೀವನವನ್ನು ನಡೆಸಲಿಚ್ಛಿಸುವ ಮಹಿಳೆಯರಿಗಾಗಿ, ಶ್ರೀಮಾತೆಯನ್ನು ಕೇಂದ್ರವಾಗಿಟ್ಟುಕೊಂಡು ಗಂಗೆಯ ಪೂರ್ವತೀರದಲ್ಲಿ, ಒಂದು ಮಠವನ್ನು ಪ್ರಾರಂಭಿಸಬೇಕು", "ಮಹಿಳೆಯರ ಅಭ್ಯುದಯವಾಗದಿದ್ದರೆ ಜಗತ್ತಿನ ಕಲ್ಯಾಣ ಸಾಧ್ಯವಾಗದು. ಇದರಿಂದಲೇ ಮಹಿಳೆಯರ ಮಠವನ್ನು ಮೊದಲು ಆರಂಭಿಸಬೇಕು" – ಸ್ವಾಮಿ ವಿವೇಕಾನಂದರ ಈ ಮಾತುಗಳು ಸಾಕಾರವಾಗುವ ಕಾಲ ಅದಾಗಿರಲಿಲ್ಲ. ತಮ್ಮ ಈ ಪರಿಕಲ್ಪನೆಯನ್ನು ವಾಸ್ತವಗೊಳಿಸುವ ಮೊದಲ ಹೆಜ್ಜೆಯಾಗಿ ಸ್ವಾಮೀಜಿ, ಆಧುನಿಕ ಶಿಕ್ಷಣದ ಜೊತೆಗೆ ಭಾರತದ ಸಂಸ್ಕೃತಿ ಹಾಗೂ ಆಧ್ಯಾತ್ಮಿಕತೆಗಳ ಬಗ್ಗೆ ಮಹಿಳೆಯರಿಗೆ ಆಳವಾದ ಅರಿವು ಮೂಡಿಸಲು ಒಂದು ಶಿಕ್ಷಣಸಂಸ್ಥೆಯನ್ನು ಆರಂಭಿಸುವ ಕಾರ್ಯದಲ್ಲಿ ತೊಡಗಿದರು. ಈ ಕಾರ್ಯಕ್ಕಾಗಿ ಅವರಿಂದ ತರಬೇತಿ ಪಡೆದ ಐರಿಷ್ ಮಹಿಳೆ ಮಾರ್ಗರೆಟ್ ನೊಬೆಲ್ ತಮ್ಮ ಜೀವನವನ್ನೇ ಅದಕ್ಕಾಗಿ ಮುಡುಪಾಗಿಟ್ಟರು.

೧೮೯೮, ಮಾರ್ಚ್ ೨೫ ರಲ್ಲಿ ಸ್ವಾಮಿ ವಿವೇಕಾನಂದರು ಮಾರ್ಗರೆಟ್‌ಗೆ ಬ್ರಹ್ಮಚರ್ಯ ದೀಕ್ಷೆ ಕೊಟ್ಟರು. ಆಕೆ ಭಗಿನಿ ನಿವೇದಿತೆಯಾಗಿ ಹೊಸ ಜೀವನವನ್ನು ಪಡೆದರು. ಕೊಲ್ಕತಾದ ಬಾಗ್‌ಬಜಾರ್ ಎಂಬ ಜಾಗದಲ್ಲಿ 'ನಿವೇದಿತಾ ಸ್ಕೂಲ್' ಆರಂಭವಾಯಿತು. ಇದೇ 'ಶ್ರೀಶಾರದಾ ಮಠ' ದ ಮೂಲರೂಪ ಎಂದು ಹೇಳಬಹುದು.

ಪೂಜ್ಯ ಭಾರತೀಪ್ರಾಣಾಜಿ ಭಗಿನಿ ನಿವೇದಿತಾರ ವಿದ್ಯಾರ್ಥಿನಿ. ಇವರೇ ಶ್ರೀಶಾರದಾಮಠದ ಮೊದಲನೆಯ ಅಧ್ಯಕ್ಷರು. ೧೯೬೦ ರಿಂದ ಒಂದಿಬ್ಬರು ಹಿರಿಯ ಸಂನ್ಯಾಸಿನಿಯರು ಅವರ ಬಳಿ ಹೋಗಿ ಅನೇಕ ಪ್ರಶ್ನೆಗಳನ್ನು ಕೇಳುತ್ತಿದ್ದರು. ಮಾತಾಜಿಯವರು ಹೇಳಿದ ಮಾತುಗಳನ್ನು ಬರೆದಿಡಲಾರಂಭಿಸಿದರು. ನಂತರ ಒಮ್ಮೆ ಈ ಬರಹಗಳನ್ನು ಮಾತಾಜಿಯವರ ಮುಂದೆ ಓದಲಾಯಿತು. ಹೀಗೆ ಅವರ ಜೀವನ ಕಥೆಯ ಸಂಕ್ಷಿಪ್ತರೂಪ ಅವರ ಮಾತುಗಳಲ್ಲಿಯೇ ಹೊರಬಂದಿತು. *ಇದರ ಕನ್ನಡ ಅನುವಾದ :* *ಪ್ರವ್ರಾಜಿಕಾ ಪರಮಪ್ರಾಣಾ*

ಆಗ ನನಗೆ ಏನೂ ಗೊತ್ತಿರಲಿಲ್ಲ, ಅರ್ಥವೂ ಆಗುತ್ತಿರಲಿಲ್ಲ. ಶಾಲೆಗೆ ಹೋಗಲು ಇಷ್ಟವಾಗುತ್ತಿತ್ತು. ಸುಧೀರಾ ಅಕ್ಕ ನಮ್ಮೆಲ್ಲರ ಅಚ್ಚುಮೆಚ್ಚಾಗಿದ್ದರು. ಸುಧೀರಾ ಅಕ್ಕನಿಗೆ ಯಾವುದೋ ಮಂತ್ರ ಗೊತ್ತಿತ್ತು ಎಂದು ಕಾಣುತ್ತದೆ. ಅವರ ಬಳಿ ಹೋದವರಾರೂ ಅವರನ್ನು ಮೆಚ್ಚದೆ ಇರಲಾಗುತ್ತಿರಲಿಲ್ಲ. ನೋಡಲು ಅವರು ಸ್ವಲ್ಪವೂ ಚೆನ್ನಾಗಿರಲಿಲ್ಲ. ಇದೊಂದು ರೀತಿ ಒಳ್ಳೆಯದೇ ಆಗಿತ್ತು ಎನ್ನಬಹುದು. ಅವರು ಜಗತ್ತನ್ನು ಲೆಕ್ಕಿಸಿದವರಲ್ಲ. ಏನನ್ನಾದರೂ ನಿರ್ಧರಿಸಿದರೆ ಹೇಗಾದರೂ ಮಾಡಿ ಅದನ್ನು ಸಾಧಿಸಿಯೇ ಸಾಧಿಸುತ್ತಿದ್ದರು. ಅವರದು ತ್ಯಾಗಮಯ ಜೀವನ. ಎಲ್ಲರೊಂದಿಗೆ ಹೊಂದಿಕೊಂಡು ನಡೆಯುವ ಅವರ ಸ್ವಭಾವ ನನ್ನ ಜೀವನದಲ್ಲಿಯೂ ಮಾರ್ಪಾಡನ್ನು ತಂದಿತು.

ನಾನು ಹುಟ್ಟಿದ್ದು ಗುಪ್ತಿಪಾಡಾ ಎಂಬ ಹಳ್ಳಿಯಲ್ಲಿ. ತಾಯಿಯ ಹೆಸರು ಸುಶೀಲಾದೇವಿ. ಅಜ್ಜ ಕೊಲ್ಕತಾದಲ್ಲಿ ಒಳ್ಳೆಯ ಕೆಲಸದಲ್ಲಿದ್ದರು. ತಂದೆ ಗುಪ್ತಿಪಾಡಾದಲ್ಲೇ ಇದ್ದರು, ಅವರ ಹೆಸರು ರಾಜೇಂದ್ರನಾಥ ಮುಖರ್ಜಿ. ೧೮೯೪, ಜುಲೈನಲ್ಲಿ ನಾನು ಹುಟ್ಟಿದ್ದು. ನನಗೆ ೩–೪ ವರ್ಷವಾದಾಗ ತಂದೆ ನಮ್ಮನ್ನು ಕೊಲ್ಕತಾಗೆ ಕರೆತಂದರು. ಅಜ್ಜ ಬಾಗ್‌ಬಜಾರಿನ ನಂ. ೨೭ ಬೋಸ್‌ಪಾರಾ ಲೇನ್‌ನಲ್ಲಿ ಮನೆ ಮಾಡಿದ್ದರು. ನಾನೇ ದೊಡ್ಡ ಮಗಳು.

ನಮ್ಮ ಮನೆಯ ಎದುರಿನ ರಸ್ತೆಯಲ್ಲಿಯೇ ಬೇಲೂರುಮಠದ ಸಾಧುಗಳು ಬಲರಾಮ ಮಂದಿರಕ್ಕೆ ಬಂದು ಹೋಗಿ ಮಾಡುತ್ತಿದ್ದರು. ಅವರನ್ನು ಕಂಡೊಡನೇ ನಮ್ಮ ಅಕ್ಕಪಕ್ಕದ ಮನೆಗಳ ಮಕ್ಕಳು ಚಪ್ಪಾಳೆ ತಟ್ಟುತ್ತಾ, "ಪರಮಹಂಸರ ಗುಂಪು ಹೋಗುತ್ತಿದೆ" ಎಂದು ಕೂಗುತ್ತಿದ್ದರು; ಬಾತುಕೋಳಿಗಳಂತೆ "ಪ್ಯಾಂಕ್, ಪ್ಯಾಂಕ್, ಪ್ಯಾಂಕ್" ಎಂದು ಶಬ್ದ ಮಾಡುತ್ತಿದ್ದರು. ನಾನೂ ಅವರೊಂದಿಗೆ ಸೇರಿಕೊಂಡು "ಪ್ಯಾಂಕ್, ಪ್ಯಾಂಕ್" ಎಂದು ಕಿರಿಚುತ್ತಿದ್ದೆ. ಮುಂದೆ ನಾನೂ ಆ ಗುಂಪಿಗೇ ಸೇರಿಕೊಳ್ಳುತ್ತೇನೆಂದು ನನಗೆ ಆಗ ಹೇಗೆ ತಾನೇ ಗೊತ್ತಾಗಬೇಕು?!

ನಾನು ಮೊದಲು ಕ್ರಿಶ್ಚಿಯನ್ ಮಿಶನರಿಗಳ ಶಾಲೆಗೆ ಓದಲು ಹೋಗುತ್ತಿದ್ದೆ. ಆಗ ನನಗೆ ಆರೋ ಏಳೋ ವಯಸ್ಸು. ಆ ಶಾಲೆಗೆ ಹೋಗುವ ರಸ್ತೆಯಲ್ಲಿಯೆ ಸೋದರಿ ನಿವೇದಿತಾರ ಶಾಲೆಯಿತ್ತು. ಆ ಶಾಲೆಯಲ್ಲಿ ಮಕ್ಕಳು ತಮ್ಮ ಸುಂದರವಾದ ಗೊಂಬೆಗಳೊಂದಿಗೆ ಆಟವಾಡುವುದು, ರಸ್ತೆಯಲ್ಲಿ ಓಡಾಡುವಾಗ ನನ್ನ ಕಣ್ಣಿಗೆ ಬೀಳುತ್ತಿತ್ತು. ನಾನು ನನ್ನ ಸ್ನೇಹಿತೆಯೊಡನೆ ಆಗಾಗ ನಿವೇದಿತಾರ ಶಾಲೆಗೆ ನುಗ್ಗಿ, ಗೊಂಬೆಗಳೊಂದಿಗೆ ಆಟವಾಡಿ, ನಮ್ಮ ಶಾಲೆಗೆ ತಡವಾಗಿ ಹೋಗುತ್ತಿದ್ದೆ. ಒಮ್ಮೆ ನಮ್ಮ ಶಾಲೆಯ ಟೀಚರ್ ನಿವೇದಿತಾರ ಶಾಲೆಗೆ ಹೋಗಬಾರದೆಂದು ಬೆದರಿಸಿದರು. ನಾವು ಅದನ್ನು ಲೆಕ್ಕಿಸಲಿಲ್ಲ. ಒಂದು ದಿನ ನಮ್ಮ ಟೀಚರ್ ರೇಗಿ ನಮ್ಮಿಬ್ಬರನ್ನೂ ಬೆಂಚಿನ ಮೇಲೆ ನಿಲ್ಲಿಸಿದರು. ಸಂಜೆ ಮಕ್ಕಳೆಲ್ಲಾ ಮನೆಗೆ ಹೋದರೂ ನಾವಿಬ್ಬರೂ ಪೆಚ್ಚಾಗಿ ಬೆಂಚಿನ ಮೇಲೆ ನಿಂತೇ ಇದ್ದೆವು. ನನ್ನ ಸ್ನೇಹಿತೆ ಅಳಲಾರಂಭಿಸಿದಳು. ನಾನು ಅವಳಿಗೆ ಗದರಿಸಿ ಹೇಳಿದೆ, "ಅಳಲಿಕ್ಕೆ ಏನಾಗಿದೆ ನಿನಗೆ? ಕೆಲಸದವಳು ಬೇರೆ ಮಕ್ಕಳನ್ನು ಮನೆಗೆ ತಲುಪಿಸಿ ಬಂದವಳೇ, ಕೋಣೆಯ



**ಕೋಲ್ಕತಾದ ನಿವೇದಿತಾ ಶಾಲೆಯ ಹಳೆಯ ಕಟ್ಟಡ**

ಬಾಗಿಲು ತೆರೆಯುತ್ತಾಳೆ. ಇವತ್ತೇ ಕೊನೆ, ನಾನಿನ್ನು ಈ ಶಾಲೆಗೆ ಬರುವುದಿಲ್ಲ." ಮರುದಿನವೇ ನಾನು ಹೋಗಿ ಸಿಸ್ಟರ್ ನಿವೇದಿತಾರ ಶಾಲೆಗೆ ಸೇರಿಕೊಂಡೆ.

೧೯೦೨ರಲ್ಲಿ ನಮ್ಮ ಶಾಲೆ ಬಾಗ್‌ಬಜಾರಿನ ನಂ. ೧೭, ಬೋಸ್ ಪಾರಾ ಲೇನ್‌ನಲ್ಲಿತ್ತು. ಸ್ವಾಮಿ ವಿವೇಕಾನಂದರು ಆಗಾಗ ಶಾಲೆಗೆ ಬರುತ್ತಿದ್ದರು. ನಾವು ತುಂಬಾ ಚಿಕ್ಕವರು. ಹೆಚ್ಚಾಗಿ ಏನೂ ನೆನಪಿಲ್ಲ. ಎತ್ತರದ ದಪ್ಪ ವ್ಯಕ್ತಿ. ಅವರ ಆ ದೊಡ್ಡ ದೊಡ್ಡ ಕಣ್ಣುಗಳು ಮಾತ್ರ ಚೆನ್ನಾಗಿ ನೆನಪಿನಲ್ಲಿವೆ. ಶ್ರೀರಾಮಕೃಷ್ಣರ ಜನ್ಮದಿನದಂದು ನಾನೂ ಸೇರಿ ೧೦–೧೨ ಮಂದಿ ಹುಡುಗಿಯರನ್ನು ಸಿಸ್ಟರ್ ನಿವೇದಿತಾ ದೋಣಿಯಲ್ಲಿ ಬೇಲೂರುಮಠಕ್ಕೆ ಕರೆದೊಯ್ದರು. ನಾವೆಲ್ಲಾ ಸ್ವಾಮೀಜಿಗೆ ಪ್ರಣಾಮ ಮಾಡಿದೆವು.

ನಿತ್ಯವೂ ಸಂಜೆ ಸ್ವಾಮಿ ಶಾರದಾನಂದರು ಶಾಲೆಗೆ ಬಂದು ಗೀತಾಪಾಠ ಮಾಡುತ್ತಿದ್ದರು. ಆಗ ಅವರಿಗೆ ಉದ್ದನೆಯ ಗಡ್ಡವಿತ್ತು. ಒಳಗೆ, ಬಿದಿರಿನ ಪರದೆಯ ಹಿಂದೆ ಹೆಂಗಸರು ಕುಳಿತುಕೊಳ್ಳುತ್ತಿದ್ದರು. ನಾವು ಚಿಕ್ಕ ಹುಡುಗಿಯರು ಅಂಗಳದಲ್ಲಿ ಸೋದರಿ ನಿವೇದಿತೆಯ ಜೊತೆ ಕುಳಿತುಕೊಳ್ಳುತ್ತಿದ್ದೆವು. ನಿವೇದಿತೆಯೇ ಹೆಂಗಸರನ್ನೆಲ್ಲಾ ಅವರವರ ಮನೆಗಳಿಂದ ಕುದುರೆ ಗಾಡಿಯಲ್ಲಿ ಕರೆತರುತ್ತಿದ್ದರು. ಮೆಟ್ಟಿಲ ಹತ್ತಿರವಿರುವ ಸಣ್ಣ ಜಾಗದಲ್ಲಿ ಕುಳಿತು ಶಾರದಾನಂದರು ಭಗವದ್ಗೀತೆ ಓದುತ್ತಿದ್ದರು. ನಾವೆಲ್ಲಾ ನಿದ್ದೆ ಮಾಡಿಬಿಡುತ್ತಿದ್ದೆವು. ಅನಂತರ ಸಿಸ್ಟರ್ ನಮ್ಮನ್ನು ಎತ್ತಿಕೊಂಡು ಮನೆಗೆ ತಲುಪಿಸಿ ಬರುತ್ತಿದ್ದರು.

ಶ್ರೀಮಾತೆಯವರ ಸಹವರ್ತಿಗಳಾದ ಯೋಗಿನ್ ಮಾ, ಗೋಲಾಪ್ ಮಾ – ಇವರನ್ನು ಆಗಾಗ ಶಾಲೆಯಲ್ಲಿ ನೋಡುತ್ತಿದ್ದೆ. ಅವರು ಸಾಧಾರಣವಾಗಿ ದಿನವೂ ಬಲರಾಮ ಮಂದಿರಕ್ಕೆ ಬಂದವರು, ಹಿಂದಿರುಗುವಾಗ ರಸ್ತೆಯಲ್ಲಿ ಸಿಸ್ಟರ್ ಅನ್ನು ಕಂಡು ಮಾತನಾಡಿಸಿ ಹೋಗುತ್ತಿದ್ದರು. ಸಿಸ್ಟರ್ ಅವರಿಗೆ ಸಾಷ್ಟಾಂಗ ಪ್ರಣಾಮ ಮಾಡುತ್ತಿದ್ದರು.

ಒಂದು ದಿನ ಸಿಸ್ಟರ್ ನಮ್ಮಲ್ಲಿ ಕೆಲವರನ್ನು ಕರೆದುಕೊಂಡು ಶ್ರೀಮಾತೆಯ ಬಳಿ ಹೋದರು. ಆಗಲೇ ಮೊದಲ ಸಲ ನಾನು ಶ್ರೀಮಾತೆಯನ್ನು ನೋಡಿದ್ದು. ಅವರು ಆಗ ಬಾಗ್‌ಬಜಾರಿನಲ್ಲಿ ಒಂದು ಬಾಡಿಗೆಯ ಮನೆಯಲ್ಲಿದ್ದರು. ೧೯೦೯ರಲ್ಲಿ ಶ್ರೀಮಾತೆ ಉದ್ಬೋಧನ್ ಮನೆಗೆ ಬಂದರು. ಆಗ ಸಿಸ್ಟರ್ ಅವರನ್ನೊಮ್ಮೆ ಶಾಲೆಗೆ ಕರೆತಂದರು. ಅವತ್ತಿನ ದಿನ ಸಿಸ್ಟರ್ ಅತ್ಯಂತ ಆನಂದದಲ್ಲಿದ್ದುದನ್ನು ಕಂಡೆ. ಅವರು ಸಣ್ಣ ಹುಡುಗಿಯಂತೆ ನಾಲ್ಕು ದಿಕ್ಕಿನಲ್ಲೂ ಓಡಾಡಿಕೊಂಡು ಇಡೀ ಶಾಲೆಯನ್ನು ಅಲಂಕಾರ ಮಾಡಿದ್ದರು. ಆಗಾಗ ನಮ್ಮನ್ನು ಶ್ರೀಮಾತೆಯ ಬಳಿ ಕರೆದುಕೊಂಡು ಹೋಗುತ್ತಿದ್ದರು. ನಮಗೆ ಆಗ ಏನೂ ಗೊತ್ತಿರಲಿಲ್ಲ, ಅರ್ಥವೂ ಆಗುತ್ತಿರಲಿಲ್ಲ. ಆದರೂ ಸಿಸ್ಟರ್ ಜೊತೆ ಓಡಾಡುವುದು, ಶ್ರೀಮಾತೆಯ ಬಳಿ ಹೋಗುವುದು – ಇವೆಲ್ಲಾ ತುಂಬಾ ಇಷ್ಟವಾಗುತ್ತಿತ್ತು. ಶಾಲೆಯಿಂದ ಮನೆಗೆ ಹೋಗಲೂ ಮನಸ್ಸಾಗುತ್ತಿರಲಿಲ್ಲ. ದೊಡ್ಡವಳಾಗುತ್ತಿದ್ದಂತೆ ಈ ಆಕರ್ಷಣೆ ಇನ್ನೂ ಹೆಚ್ಚಾಯಿತು. ಸುಧೀರಾ ಅಕ್ಕ ಅದೇ ಶಾಲೆಗೆ ಶಿಕ್ಷಕಿಯಾಗಿ ಬಂದಾಗ ನಾವು ಮೇಲಿನ ತರಗತಿಯಲ್ಲಿದ್ದೆವು. ಬಹುಬೇಗ ಅವರೊಂದಿಗೆ ನಮ್ಮಲ್ಲಿ ಆತ್ಮೀಯತೆ ಬೆಳೆಯಿತು. ಸುಧೀರಾ ಅಕ್ಕ ಎಲ್ಲರಲ್ಲಿಯೂ ಆಧ್ಯಾತ್ಮಿಕ ಭಾವವನ್ನು ಬೆಳೆಸಲು ವಿಶೇಷ ಪ್ರಯತ್ನ ಮಾಡುತ್ತಿದ್ದರು.

ಚಿಕ್ಕವಳಾಗಿದ್ದಾಗಲೇ ತಂದೆ, ತಾಯಿ ನನಗೆ ಮದುವೆ ಮಾಡಿದ್ದರು. ಆದರೆ ಸಂಸಾರಕ್ಕೆ ನನ್ನನ್ನು ಸೆಳೆಯಲು ಅವರಿಂದ ಸಾಧ್ಯವಾಗಲಿಲ್ಲ. ಏನು ಮಾಡಿದರೂ ನನ್ನ ಮನಸ್ಸು ಆ ಕಡೆ ಹೋಗಲಿಲ್ಲ. ತಂದೆ ತಾಯಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ಯತ್ನಿಸಿದರು. ನಾನೂ ದೊಡ್ಡವಳಾಗುತ್ತಿದ್ದೆ. ಹೀಗಾಗಿ ಎಲ್ಲರೂ ಸೇರಿ ನನ್ನನ್ನು ಮಾವನ ಮನೆಗೆ ಕಳುಹಿಸುವ ಏರ್ಪಾಡು ಮಾಡಲಾರಂಭಿಸಿದರು. ಈಗೇನು ಮಾಡಲಿ? ಚಿಂತಿಸಿ, ಚಿಂತಿಸಿ ನನಗೆ ದಿಕ್ಕು ತೋಚದಂತಾಯಿತು. ಸುಧೀರಾ ಅಕ್ಕನ ಹತ್ತಿರ ಎಲ್ಲವನ್ನೂ ಹೇಳಿಕೊಂಡೆ. ಅವರ ಸಹಾನುಭೂತಿಯಿಂದ ಮನಸ್ಸಿಗೆ ಮತ್ತೂ ಬಲ ಬಂದಿತು. "ಒತ್ತಾಯ ಹೆಚ್ಚಾದರೆ ಮನೆ ಬಿಟ್ಟು ಹೊರಗೆ ಬಾ" ಎಂದು ಅವರು ಸೂಚಿಸಿದರು.

ಒಮ್ಮೆ, ಸುಧೀರಾ ಅಕ್ಕ ಕೊಲ್ಕತಾದಿಂದ ಹೊರಗೆ ಹೋಗಿದ್ದರು. ಈ ಕಡೆ, ಮನೆಯ ಜನ ನನ್ನನ್ನು ಕಳುಹಿಸುವ ವ್ಯವಸ್ಥೆ ಮಾಡಲಾರಂಭಿಸಿದರು. ರಾತ್ರಿ ವೇಳೆ ಮನೆ ಬಿಟ್ಟು ಹೊರಗೆ ಬಂದೆ. ಸುಧೀರಾ ಅಕ್ಕ ಮೊದಲೇ ಹೇಳಿಟ್ಟಿದ್ದರು. "ಮನೆ ಬಿಟ್ಟು ಬಂದರೆ ನೀನು ನರೇಶಳ ಮನೆಗೆ ಹೋಗು. ಅವಳು ಸಹಾಯ ಮಾಡುತ್ತಾಳೆ" ಎಂದು. ನಾನು ಪೆದ್ದಿಯಂತೆ ಅಲ್ಲಿಗೆ ಹೋಗದೆ, ನಮ್ಮ ಸ್ಕೂಲಿನ ಮಹಾಮಾಯಾ ಎಂಬ ಹುಡುಗಿಯ ಮನೆಗೆ ಹೋದೆ. ಆ ಮನೆಯವರು ಹೆದರಿಕೊಂಡು ನನ್ನನ್ನು ಮನೆಗೆ ಸೇರಿಸದೆ, ಆ ರಾತ್ರಿಯೇ ಚತುರ ಎಂಬ ಹುಡುಗಿಯ ಮನೆಯಲ್ಲಿ ನನ್ನನ್ನು ಬಿಟ್ಟುಬಂದರು.